ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್. ಸುನಿಲ್ ದತ್ ಯಾದವ್

ಶ್ರೀಮತಿ ಪೂರ್ಣಿಮಾ ಸುಧಿನ್ ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು

ರಿಟ್ ಅರ್ಜಿಸಂಖ್ಯೆ: 50210/2018 (ಎಲ್ಬಿ-ಇಎಲ್ಇ), ದಿನಾಂಕ 15 ನೇ ಡಿಸೆಂಬರ್, 2018.

ಆಜ್ಞೆ

ನ್ಯಾಯಮೂರ್ತಿ ಶ್ರೀ ಎಸ್. ಸುನಿಲ್ ದತ್ ಯಾದವ್:

ಚಿಕ್ಕಮಗಳೂರು ತಾಲೂಕಿನ ಆಲ್ದೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿರುವ ಅರ್ಜಿದಾರರು,ದಿನಾಂಕ: 30.6.2015 ರಂದು ಇವರು ದಿನಾಂಕ: 02.11.2018 ರ ಅನುಬಂಧ-ಜಿ ನಲ್ಲಿ ಸಹಾಯಕ ನಿರ್ದೇಶಕರು, ಚಿಕ್ಕಮಗಳೂರು ಇವರು ಅವಿಶ್ವಾಸ ಗೊತ್ತುವಳಿಯ ಸಭೆಯನ್ನು ಪರಿಶೀಲನೆಗಾಗಿ ಕರೆದು ನೀಡಿದ ನೋಟೀಸನ್ನು ರದ್ದುಗೊಳಿಸಲು ಸರ್ಷಿಯೋರರಿ ರಿಟ್ ನೀಡಬೇಕೆಂದು ಕೋರಿ ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ (ಸಂಕ್ಷಿಪ್ತವಾಗಿ ' ಅಧಿನಿಯಮ ') 49 ( 2) ನೇ ಪ್ರಕರಣದ ಮೇರೆಗೆ ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಿರುವ ಹಿಂದಿನ ಪ್ರಯತ್ನವು, ಆಪಾದನೆಗಳು ಇಲ್ಲದ ಕಾರಣದಿಂದ ಫಲಪ್ರದವಾಗಿರಲಿಲ್ಲ, ಎರಡನೇ ದೂರನ್ನುದಿನಾಂಕ: 26.10.2018 ರಂದು ಇನ್ನಿತರ ಆಪಾದನೆಗಳೊಂದಿಗೆ ಸಲ್ಲಿಸಲಾಗಿದೆ ಎಂಬುದು ಅರ್ಜಿದಾರರ ಹೇಳಿಕೆಯಾಗಿದೆ.

3. ಅವಿಶ್ವಾಸ ಗೊತ್ತುವಳಿಯ ಪರಿಗಣನೆಗಾಗಿದಿನಾಂಕ: 17.11.2018 ರ ಬೆಳಿಗ್ಗೆ 11 ಕ್ಕೆ ಸಭೆಯನ್ನು ನಿಗದಿಪಡಿಸಿ,ದಿನಾಂಕ: 2.11.2018 ರಂದು ೧ ಅನುಬಂಧ-ಜಿ ಪ್ರಕಾರ ಸಹಾಯಕರ ಆಯುಕ್ತರು ನೋಟೀಸನ್ನು ಹೊರಡಿಸಿರುವುದು ಗಮನಕ್ಕೆ ಬಂದಿತು ಎಂದು ಅರ್ಜಿದಾರರು ಹೇಳಿದ್ದಾರೆ.ಅನುಬಂಧ-ಜಿ ಯಲ್ಲಿರುವ ಈ ನೋಟೀಸು, ನಿರ್ದಿಷ್ಟಪಡಿಸುವುದೇನೆಂದರೆ, ಇದು ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಯ ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ವಿರುದ್ಧ ಅವಿಶ್ವಾಸ ಸೂಚನೆ ನಿಯಮಗಳು) 1994 ರ (ಸಂಕ್ಷಿಪ್ತವಾಗಿ ' ನಿಯಮಗಳು) 3 ( 2) ನೇ ನಿಯಮದೊಂದಿಗೆ ಓದಲಾದ ಅಧಿನಿಯಮದ 49 ( 1) ನೇ ಪ್ರಕರಣದ ಪರಿಭಾಷೆಯಲ್ಲಿ ಅವಿಶ್ವಾಸ ಸೂಚನೆಯ ನೋಟೀಸಾಗಿದೆ.

4. ಪ್ರತ್ಯರ್ಜಿದಾರಸಂಖ್ಯೆ: 2 ಇವರು ನೀಡಿದ ಸದರಿ ನೋಟೀಸನ್ನು ಅರ್ಜಿದಾರರು ಪ್ರಶ್ನಿಸಿದ್ದು, ಅರ್ಜಿಯನ್ನು ಪುರಸ್ಕರಿಸುವಾಗ ಈ ನ್ಯಾಯಾಲಯವುದಿನಾಂಕ: 16.11.2018 ರಂದು ಮಧ್ಯಕಾಲೀನ ಆದೇಶವನ್ನು ನೀಡಿದ್ದು, ಅದನ್ನು ಕಾಲಕಾಲಕ್ಕೆ ವಿಸ್ತರಿಸಲಾಗಿದೆ.

5. ಅರ್ಜಿದಾರರ ಪ್ರಮುಖ ವಾದವೇನೆಂದರೆ, ಆಪಾದನೆಗಳೊಂದಿಗೆ ಮಂಡಿಸಿದ ಅವಿಶ್ವಾಸ ಸೂಚನೆಯು ಅಧಿನಿಯಮದ 49 ( 2) ನೇ ಪ್ರಕರಣದ ನಿಬಂಧನೆಗಳಿಗನುಸಾರ ಅವಿಶ್ವಾಸ ಸೂಚನೆಯಾಗಿದೆ ಮತ್ತು ಇಂತಹ ಅವಿಶ್ವಾಸ ಸೂಚನೆಯು ರಿಟ್ ಅರ್ಜಿ 844/2018 ರಲ್ಲಿ ಮತ್ತು ತತ್ಸಂಬಂಧಿತ ವಿಷಯಗಳಲ್ಲಿ ವಿಧಿಸಿದ ಕಾನೂನಿನ ಹಿನ್ನೆಲೆಯಲ್ಲಿ ಅನುಮತಿಸಲಾಗದು ಎಂಬುದಾಗಿದೆ.

6. ಮೇಲೆ ತಿಳಿಸಿದ ಮೊಕದ್ದಮೆಯಲ್ಲಿ ಅದರ ತೀರ್ಪಿನ ಕಂಡಿಕೆ 47 ರಲ್ಲಿ, ಅಧಿನಿಯಮದ 49 ( 2) ನೇ ಪ್ರಕರಣದ ನಿಬಂಧನೆಗಳನುಸಾರ ಮಂಡಿಸಲಾದ ಅವಿಶ್ವಾಸ ಸೂಚನೆಯ ಪ್ರಕ್ರಿಯೆ ವಿಧಾನ ಮತ್ತು ಕಾರ್ಯವಿಧಾನವನ್ನು ನಿಯಮಗಳ ಮೇರೆಗೆ ಪ್ರತ್ಯೇಕವಾಗಿ ಉಪಬಂಧಿಸುವ ಅಗತ್ಯವಿದ್ದು, ಅದನ್ನು ಮಾಡುವವರೆಗೆ ಇಂಥ ಅವಿಶ್ವಾಸ ಸೂಚನೆಯನ್ನು 1994 ರ ನಿಯಮಗಳ ಮೇರೆಗೆ ಮುಂದುವರೆಸಲಾಗದು, ಎಂದು ಈ ನ್ಯಾಯಾಲಯದ ವಿಭಾಗೀಯ ಪೀಠವು ಅಭಿಪ್ರಾಯಪಟ್ಟಿದೆ.

7. ಇದಕ್ಕೆ ಪ್ರತ್ಯುತ್ತರವಾಗಿ, ಪ್ರತ್ಯರ್ಜಿದಾರಸಂಖ್ಯೆ: 1 ಮತ್ತು 2 ಇವರ ಪರ ಹಾಜರಾದ ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರಾದ ಪೂರ್ಣಿಮಾ ಹೊನ್ನಾಪುರ ಇವರು ಅವಿಶ್ವಾಸ ಸೂಚನೆಯನ್ನು ಮಂಡಿಸುವ ಉದ್ದೇಶವನ್ನು ವ್ಯಕ್ತಪಡಿಸಿ ನೀಡಲಾದ ನೋಟೀಸು ಆಪಾದನೆಗಳನ್ನೊಳಗೊಂಡಿದ್ದಾಗ್ಯೂ, ಸಹಾಯಕ ಆಯುಕ್ತರು 3 ( 2) ನೇ ನಿಯಮಗಳ ಮೇರೆಗೆ ಪರ್ಯಾಲೋಚಿಸಿದಂತೆ ಸದಸ್ಯರಿಗೆ ನೋಟೀಸನ್ನು ನೀಡುವ ಸಂದರ್ಭದಲ್ಲಿ ಸದರಿ ಅವಿಶ್ವಾಸ ಸೂಚನೆಯು ಅಧಿನಿಯಮದ 49 ( 1) ನೇ ಪ್ರಕರಣದ ಮೇರೆಗಿನ ಸೂಚನೆಯಾಗಿದೆ ಎಂದು ಮತ್ತು ಅದರಿಂದ, ಅರ್ಜಿದಾರರ ವಾದವು ಸಮರ್ಥನೀಯವಲ್ಲವೆಂದು ಹೇಳಿದರು ಎಂಬುದಾಗಿ ವಾದಿಸಿದ್ದಾರೆ.

8. ಇದಲ್ಲದೆ, ಮಾನ್ಯ ಹೆಚ್ಚುವರಿ ಸರ್ಕಾರಿ ನ್ಯಾಯವಾದಿಗಳು, ಒಮ್ಮೆ ಸಹಾಯಕ ಆಯುಕ್ತರು ಸಲ್ಲಿಸಿದ ನೋಟೀಸು, ಅಧಿನಿಯಮದ 49 ( 1) ನೇ ಪ್ರಕರಣದ ಅಡಿಯಲ್ಲಿ (ಯಾವ ನಿರ್ಬಂಧವು ಇಲ್ಲದ) ಸಲ್ಲಿಸಿದ ನೋಟಿಸ್ ಎಂದು ಪರಿಗಣಿಸಿದಲ್ಲಿ, ಅದನ್ನು ಗ್ರಾಮ ಪಂಚಾಯತಿಯ ಮುಂದೆ ಪರಿಗಣನೆಗೆ ಇಡಬೇಕಾಗುವುದು ಮತ್ತು ಅದನ್ನು ಅವಿಶ್ವಾಸ ಸೂಚನೆಯ ಪರಿಗಣನೆಯು ಈ ನಿಯಮಗಳ 7 ನೇ ನಿಯಮ ನಿಬಂಧನೆಗಳನುಸಾರ ಪರಿಗಣಿಸಬೇಕಾಗುವುದೆಂದು ನಿವೇದಿಸಿದ್ದಾರೆ.

9. ಇಲ್ಲಿಯವರೆಗೂ ಸದರಿ ಸಭೆಯಲ್ಲಿ ಅವಿಶ್ವಾಸ ಸೂಚನೆಯ ಬಗ್ಗೆ ಯಾವುದೇ ಚರ್ಚೆ ನಡೆದಿಲ್ಲದಿರುವುದರಿಂದ ಇದನ್ನು ನೇರವಾಗಿ ಮತಕ್ಕೆ ಹಾಕಬೇಕೆಂದಿರುವುದರಿಂದ, ಸ್ವತಃ ಸಹಾಯಕ ಆಯುಕ್ತರೇ ಈ ಪ್ರಸ್ತಾಪವನ್ನು ಅಧಿನಿಯಮದ 4 (1) ನೇ ಪ್ರಕರಣದ ಅಡಿಯಲ್ಲಿನ ಸೂಚನೆ ಎಂದು ಭಾವಿಸಿದ್ದರಿಂದಾಗಿ, ಅರ್ಜಿದಾರರ ವಾದವು ಸಮರ್ಥನೀಯವಾದುದಲ್ಲವೆಂದು ಸಹ ಅವರು ವಾದಿಸಿದ್ದಾರೆ.

10. ಇದಲ್ಲದೆ, ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು, ಅವಿಶ್ವಾಸ ಸೂಚನೆಯ ಮಂಡನೆಯ ಉದ್ದೇಶವನ್ನು ವ್ಯಕ್ತಪಡಿಸುವ ನೋಟೀಸನ್ನು ಒಮ್ಮೆ ಸಲ್ಲಿಸಿದರೆ, ತಾರ್ಕಿಕ ನಿರ್ಣಯಕ್ಕೆ ಬರಲು ತಡೆಯುವ ಯಾವುದೇ ವಿವೇಚನಾಧಿಕಾರವನ್ನು ಸಹಾಯಕ ಆಯುಕ್ತರು ಹೊಂದಿಲ್ಲ ಮತ್ತು ಇದು, ವಿಭಾಗೀಯ ಪೀಠದ ತೀರ್ಪಿನ ಕಂಡಿಕೆ 46 ರ ಕಡೆಗೆ ಗಮನ ಸೆಳೆಯುತ್ತಿದ್ದು, ಅದರಲ್ಲಿ ಅಧಿನಿಯಮದ 49 ( 1) ನೇ ಪ್ರಕರಣದ ಅಡಿಯಲ್ಲಿ ಪ್ರಕ್ರಿಯಾ ಅಗತ್ಯತೆಯನ್ನು ಒಮ್ಮೆ ಅವಿಶ್ವಾಸ ಸೂಚನೆಯು ಈಡೇರಿಸಿದಲ್ಲಿ, ಅದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ ಎಂದು ಉಲ್ಲೇಖಿಸಲಾಗಿದೆ ಎಂದು ನಿವೇದಿಸಿಕೊಂಡಿದ್ದಾರೆ.

11. ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು ಕಂಡಿಕೆ 48 ರಲ್ಲಿನ ಅಭಿಪ್ರಾಯಗಳನ್ನು ಸಹ ಉಲ್ಲೇಖಿಸಿದ್ದು, ಅದರಲ್ಲಿ, ನಿರ್ಣಯಿಸಲಾದ ರಿಟ್ ಅರ್ಜಿಗಳಲ್ಲಿ ಈಗ ಪರಿಣಾಮಕಾರಿಯಾಗಿರದ ಅಧಿನಿಯಮದ 49 ( 2) ನೇ ಪ್ರಕರಣದ ಮೇರೆಗೆ ಮಂಡಿಸಿದ ಅವಿಶ್ವಾಸ ಸೂಚನೆಗಳನ್ನು ಅಧಿನಿಯಮದ 49 ನೇ ಪ್ರಕರಣದ ( 1) ನೇ ಉಪ ಪ್ರಕರಣದ ಅಡಿಯಲ್ಲಿ ಮಂಡಿಸಲಾದವುಗಳು ಎಂದು ಭಾವಿಸುವುದು ಎಂದು ಅಭಿಪ್ರಾಯಪಡಲಾಗಿದೆ.

12. ಗ್ರಾಮ ಪಂಚಾಯಿತಿಯ ಇತರ ಸದಸ್ಯ ಪ್ರತಿವಾದಿಸಂಖ್ಯೆ: 4 ರಿಂದ 26 ಇವರ ಪರ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ಚನ್ನಬಸಪ್ಪ ಇವರು, ಅರ್ಜಿದಾರಳ ವಾದಗಳಿಗೆ ಸಂಬಂಧಿಸಿದ ನಿರ್ಣಯಗಳನ್ನು ದಾಖಲಿಸುವ ಅವಶ್ಯಕತೆಯನ್ನು ನಿವಾರಿಸುವ ಅವಿಶ್ವಾಸ ಸೂಚನೆಯನ್ನು ಮಂಡಿಸುವುದಕ್ಕೆ ಸಂಬಂಧಿಸಿದ ತಮ್ಮ ನೋಟೀಸಿನಲ್ಲಿನ ಆಪಾದನೆಗಳನ್ನು ಕೈಬಿಡಲು ಸಿದ್ಧರಿರುವರೆಂದು ಮತ್ತು ಆಪಾದನೆಗಳು ಇಲ್ಲದಿದ್ದರೆ, ಗೊತ್ತುವಳಿಯನ್ನು ಅಧಿನಿಯಮದ 49 ( 1) ನೇ ಪ್ರಕರಣದ ಅಡಿಯಲ್ಲಿ ಪರಿಗಣಿಸಬಹುದೆಂದು ಹಾಗೂ ಪ್ರಸ್ತುತ ಮೊಕದ್ದಮೆಯ ಸಂಗತಿಗಳಲ್ಲಿ, ಯಾವುದೇ ಪ್ರಕ್ರಿಯಾ ಉಲ್ಲಂಘನೆಗಳಾಗಿರುವುದಿಲ್ಲ ಮತ್ತು ಈ ನಿಯಮಗಳ 3 ( 2) ನೇ ನಿಯಮದ ಅಡಿಯಲ್ಲಿ ಪರ್ಯಾಲೋಚಿಸಿದಂತೆ ಎಲ್ಲಾ ಪಕ್ರಿಯಾ ಅಗತ್ಯತೆಗಳ ಅನುಪಾಲನೆಯಾಗಿದೆ ಎಂದು, ಅವಿಶ್ವಾಸ ಸೂಚನೆಯನ್ನು ಅಧಿನಿಯಮದ 49 ( 1) ನೇ ಪ್ರಕರಣದ ಅಡಿಯಲ್ಲಿನ ಸೂಚನೆ ಎಂಬುದಾಗಿ ಪರಿಗಣಿಸಬಹುದಾಗಿದೆ ಎಂದು ನಿವೇದಿಸಿಕೊಂಡಿದ್ದಾರೆ.

13) ಆದಾಗ್ಯೂ, ಶ್ರೀಮತಿ ಲಕ್ಷ್ಮಮ್ಮ -ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು, ರಿಟ್ ಅಪೀಲುಸಂಖ್ಯೆ: 844/2018 ಇದರೊಂದಿಗೆ ಇತರೆ ಮೊಕದ್ದಮೆಯ 47 ನೇ ಕಂಡಿಕೆಯಲ್ಲಿ ವಿಭಾಗೀಯ ಪೀಠದ ಅಭಿಪ್ರಾಯಗಳ ಮೇರೆಗೆ ಪ್ರಕ್ರಿಯೆ ಸಂಬಂಧದಲ್ಲಿ ಉಪಬಂಧಿಸಲು ನಿಯಮಗಳನ್ನು ರಚಿಸುವವರೆಗೆ, ಅವಿಶ್ವಾಸ ಸೂಚನೆ ಸಂಬಂಧಿ ಆಪಾದನೆಗಳು ಕಾರ್ಯಾತ್ಮಕವಾಗುವುದಿಲ್ಲವೆಂದು ಸ್ಪಷ್ಟವಾಗಿ ನಿರ್ಣಯಿಸಬೇಕಾಗಿದೆ ಎಂದು ಮತ್ತು ಹೀಗಾಗಿ ಯಾವುದೇ ಅವಿಶ್ವಾಸ ಸೂಚನೆಯನ್ನು ಮಂಡಿಸಲಾಗುವುದಿಲ್ಲ ಎಂದು ಅರ್ಜಿದಾರರು ನಿವೇದಿಸಿಕೊಂಡಿದ್ದಾರೆ.ಪ್ರಸ್ತಾವನೆಯನ್ನು ಅಧಿನಿಯಮದ 49 ( 2) ನೇ ಪ್ರಕರಣದ ಮೇರೆಗೆ ಮಂಡಿಸಲಾದ ಅವಿಶ್ವಾಸ ಸೂಚನೆಯನ್ನು ಅಧಿನಿಯಮದ 49 ( 1) ನೇ ಪ್ರಕರಣದ ಅಡಿಯಲ್ಲಿನ ಅವಿಶ್ವಾಸ ಸೂಚನೆಯೆಂದು ಪರಿಗಣಿಸುವ ಯಾವುದೇ ಅಧಿಕಾರ ಸಹಾಯಕ ಆಯುಕ್ತರಿಗೆ ಇರುವುದಿಲ್ಲವೆಂದೂ ಸಹಾ ವಾದಿಸಿದ್ದಾರೆ.

14. ಎರಡೂ ಕಡೆಯ ಮಾನ್ಯ ನ್ಯಾಯವಾದಿಗಳ ನಿವೇದನೆಗಳನ್ನು ಸವಿಸ್ತಾರವಾಗಿ ಆಲಿಸಲಾಗಿದೆ.

15. ಪ್ರಸ್ತುತ ಸಂಗತಿಗಳ ಹಿನ್ನಲೆಯಲ್ಲಿ, ಅವಿಶ್ವಾಸ ಸೂಚನೆಯನ್ನು ಮಂಡಿಸುತ್ತಿರುವ ಸದಸ್ಯರು, ಯಾವ ಉಪಬಂಧದ ಮೇರೆಗೆ ಅವಿಶ್ವಾಸ ಸೂಚನೆಯು ನೋಟೀಸನ್ನು ನೀಡುತ್ತಿರುವರೋ ಆ ಉಪಬಂಧಗಳನ್ನು ಅವರು ಉಲ್ಲೇಖಿಸಿರುವುದಿಲ್ಲ.ತದನುಸಾರವಾಗಿ ಅಂಥ ಸಂದರ್ಭಗಳಲ್ಲಿ ಅವಿಶ್ವಾಸ ಸೂಚನೆಯ ನೋಟೀಸಿನ ಒಳಾಂಶಗಳನ್ನು ಕುರಿತು ಅತ್ಯಂತ ಸ್ಥೂಲ ವಿಚಾರಣೆ ಮಾಡುವುದು ಮತ್ತು ಸದರಿ ಅವಿಶ್ವಾಸ ಸೂಚನೆಯು (ಆಪಾದನೆಗಳಿಲ್ಲದೆ) ಅಧಿನಿಯಮದ 49 ( 1) ನೇ ಪ್ರಕರಣದ ಅಡಿಯಲ್ಲಿ ಬರುವುದೇ ಅಥವಾ ಅಧಿನಿಯಮದ 49 ( 2) ನೇ ಪ್ರಕರಣದಡಿ ಬರುವುದೇ ಎಂಬುದು ಸಹಾಯಕ ಆಯುಕ್ತರ ಜವಾಬ್ದಾರಿಯಾಗಿದ್ದು, ಅದರಂತೆ ಮುಂದುವರಿಯಬೇಕಾಗುತ್ತದೆ.

16. ಅವಿಶ್ವಾಸ ಸೂಚನೆಯ ಎರಡು ವಿಧಗಳು ಇದ್ದವೆಂದು ವಿಧಾನಮಂಡಲವು ಉದ್ದೇಶಿಸಿದ್ದರೆ, ಸಹಾಯಕ ಆಯುಕ್ತರು, ಅವಿಶ್ವಾಸ ಸೂಚನೆಯು ಯಾವ ವಿಧಕ್ಕೆ ಸೇರುತ್ತದೆಯೋ ಅದಕ್ಕೆ ಸಂಬಂಧಿಸಿದ ದೂರಿನ ಪರಿಶೀಲನೆಯ ಆಧಾರದ ಮೇಲೆ ಮಾತ್ರ ನಿರ್ಧರಿಸಬೇಕಾಗುತ್ತದೆಯೆಂಬುದು ಸ್ಪಷ್ಟವಾಗಿದೆ.ಇದು ಅಧಿನಿಯಮದ 49 ( 1) ನೇ ಪ್ರಕರಣದ ಅಡಿಯಲ್ಲಿ ಬರುವ ಅವಿಶ್ವಾಸ ಸೂಚನೆಯಾಗಿದ್ದರೆ, ಈಗಾಗಲೇ ರಚಿಸಿರುವ ನಿಯಮಗಳ ಆಧಾರದ ಮೇಲೆ ಆ ಕುರಿತು ಸಹಾಯಕ ಆಯುಕ್ತರು ಕ್ರಮ ಕೈಗೊಳ್ಳಬೇಕಾಗುತ್ತದೆ ಮತ್ತು ಇನ್ನೊಂದೆಡೆ, ಅಧಿನಿಯಮದ 49 ( 2) ನೇ ಪ್ರಕರಣದ ಅಡಿಯಲ್ಲಿ ಬರುವ ಅವಿಶ್ವಾಸ ಸೂಚನೆಯಾಗಿದ್ದರೆ, ಲಕ್ಷ್ಮಮ್ಮ ಮೊಕದ್ದಮೆಯಲ್ಲಿ (ಮೇಲೆ ಹೇಳಿದ) ವಿಭಾಗೀಯ ಪೀಠವು ಸೂಚನೆಯ

ಕಾರ್ಯವಿಧಾನಗಳನ್ನು ಅಳವಡಿಸಿಕೊಳ್ಳಬೇಕಾಗಿರುತ್ತದೆ.ಅಭಿಪ್ರಾಯಪಟ್ಟಂತೆ ಅವಿಶ್ವಾಸ ಸೂಚನೆಯ ಅಂಥ ವಿಷಯಗಳಿಗೆ ಸಂಬಂಧಿಸಿದಂತೆ ಅಳವಡಿಸಿ ಕೊಳ್ಳಬೇಕಾದ ಕಾರ್ಯವಿಧಾನದ ಸಂಬಂಧದಲ್ಲಿ ನಿಯಮಗಳನ್ನು ರಚಿಸುವವರೆಗೆ, ಅಂಥ ಗೊತ್ತುವಳಿ ಕುರಿತು ಕ್ರಮ ಕೈಗೊಳ್ಳಲು ಸಹಾಯಕ ಆಯುಕ್ತರು ಯಾವುದೇ ವಿವೇಚನೆ ಹೊಂದಿರುವುದಿಲ್ಲ.

17. ವಿಭಾಗೀಯ ಪೀಠದ ನಿರ್ಣಯದ ಪ್ರಕಾರ ಅಧಿನಿಯಮದ 49 ( 2) ನೇ ಪ್ರಕರಣದ ಅಡಿಯಲ್ಲಿ ಅವಿಶ್ವಾಸ ಸೂಚನೆಯನ್ನು ಪರಿಗಣಿಸುವ ಸಂಬಂಧದಲ್ಲಿ ಕಾರ್ಯವಿಧಾನವನ್ನು ಉಪಬಂಧಿಸಿ ನಿಯಮಗಳನ್ನು ರಚಿಸುವವರೆಗೆ ಆ ಪರಿಣಾಮಕ್ಕೆ ಅಧಿಕೃತ ಅರ್ಥ ವಿವರಣೆಯನ್ನು ಒಮ್ಮೆ ವಿಭಾಗೀಯ ಪೀಠವು ಉಚ್ಚರಿಸಿದಲ್ಲಿ ಅಂಥ ಯಾವುದೇ ಅವಿಶ್ವಾಸ ಸೂಚನೆಗಳನ್ನು ಮಂಡಿಸಲಾಗುವುದಿಲ್ಲ ಎಂಬುದು ಸ್ಪಷ್ಟವಾಗಿದೆ.

18. ರಿಟ್ ಅರ್ಜಿಸಂಖ್ಯೆ: 844/2018 ರಲ್ಲಿ ವಿಭಾಗೀಯ ಪೀಠದ ತೀರ್ಪನ್ನು ಈ ಕೆಳಗಿನಂತೆ ಅವಲೋಕಿಸಲಾಗಿದೆ:

66 ಮಾನ್ಯ ಏಕ ಪೀಠ ನ್ಯಾಯಾಧೀಶರು, 49 ನೇ ಪ್ರಕರಣದ ( 2) ನೇ ಉಪ-ಪ್ರಕರಣದ ಅಡಿಯಲ್ಲಿನ ಅವಿಶ್ವಾಸ ಸೂಚನೆಯು, ( 1) ನೇ ಉಪ-ಪ್ರಕರಣದ ಪ್ರಕಾರ ಅದನ್ನು ಪರಿಗಣಿಸುವುದಕ್ಕಾಗಿ ಇರುವ ಕ್ರಮ ಮತ್ತು ವಿಧಾನಕ್ಕೆ ಒಳಪಡುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.ಅಂಥ ಕ್ರಮ ಮತ್ತು ವಿಧಾನವು ಅವಿಶ್ವಾಸ ಸೂಚನೆಯನ್ನು ಮಂಡಿಸುವುದಕ್ಕೆ ಮತ್ತು ಆ ಆಧಾರದ ಮೇಲೆ ಗೊತ್ತುವಳಿಯನ್ನು ಅಳವಡಿಸಿಕೊಳ್ಳುವುದಕ್ಕೆ ಸದಸ್ಯರ ಸಂಖ್ಯೆಯ ಅಗತ್ಯತೆಗೆ ಮಾತ್ರ ಸಂಬಂಧಿಸಿರುತ್ತದೆ.ಆದಾಗ್ಯೂ, 49 ನೇ ಪ್ರಕರಣದ ( 2) ನೇ ಉಪ-ಪ್ರಕರಣದ ಮೇರೆಗೆ ಗೊತ್ತುವಳಿಯ ಪರಿಗಣನೆಗಾಗಿ ಇರುವ ಕಾರ್ಯ ವಿಧಾನವನ್ನು ಮತ್ತು ವಿಧಾನವು ಉಪಬಂಧಿಸತಕ್ಕದ್ದು ಮತ್ತು 1993 ರ ಅಧಿನಿಯಮದ 49 ನೇ ಪ್ರಕರಣದ ( 2) ನೇ ಉಪ-ಪ್ರಕರಣದ ಮೇರೆಗಿನ ಅಂಥ ಯಾವುದೇ ಗೊತ್ತುವಳಿಯನ್ನು ದಿನಾಂಕ:21.8.2018 ರ ಅಧಿಸೂಚನೆಯ ಮೂಲಕ ತಿದ್ದುಪಡಿ ಮಾಡಿದಂತೆ ಸಹ 1994 ರ ನಿಯಮಗಳ ಮೇರೆಗೆ ಕ್ರಮ ಕೈಗೊಳ್ಳತಕ್ಕದ್ದಲ್ಲ.

19. ಹಾಗಾಗಿ, ಆಪಾದನೆಗಳ ಸಹಿತ ಅವಿಶ್ವಾಸ ಸೂಚನೆಯನ್ನು ಮಂಡಿಸಬೇಕೆಂದು ಕೋರಿದ್ದರೂ ಸಹಾ, ಅಧಿನಿಯಮದ 49 (2) ನೇ ಪ್ರಕರಣದ ಅಡಿಯಲ್ಲಿ ಅವಿಶ್ವಾಸ ಸೂಚನೆಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಕಾರ್ಯವಿಧಾನ ಉ ಪ ಬ ಂ ಧಿ ಸಿ ನಿ ಂ ತವಗಳನ ರ ಚಿ ಸುವ ವರೆಗೆ ಅದನ ಅವಲ ಂ ಬಿಸಲಾಗುವುದಿಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

20. ಆಪಾದನೆಗಳ ಸಹಿತ ಅವಿಶ್ವಾಸ ಸೂಚನೆಯ ಸಂಬಂಧದಲ್ಲಿನ ವಿವರಗಳಲ್ಲಿ ಅವಿಶ್ವಾಸ ಸೂಚನೆಯ ಪರಿಗಣನೆಗಾಗಿ ಉಪಬಂಧಿಸಿರುವದಿನಾಂಕ: 17.04.2018 ರ ಅಧಿಸೂಚನೆಯನ್ನು ಅಷ್ಟೇ ಅಲ್ಲದೆದಿನಾಂಕ: 12.06.2018 ರ ಅಧಿಸೂಚನೆಯನ್ನು ಮತ್ತು ಎಲ್ಲಾ ಇತರ ಪತ್ರಗಳನ್ನು ಹಿಂತೆಗೆದುಕೊಳ್ಳಲಾಗುತ್ತದೆಂದು ನ್ಯಾಯಾಲಯಗಳು ಹೊರಡಿಸುವ ಆದೇಶಗಳಿಗೆ ಅನುಸಾರವಾಗಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು ಗಮನ ಸೆಳೆದಿದ್ದಾರೆ.ದಿನಾಂಕ: 17.10.2018 ರ ಪತ್ರಗಳನ್ನು ಅವಲೋಕಿಸಿದ ನಂತರ, ಆಪಾದನೆಗಳ ಸಹಿತದ ಅವಿಶ್ವಾಸ ಸೂಚನೆಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಇತರ ಕಾರ್ಯಕಾರಿ ಸೂಚನೆಗಳಿರುವುದಿಲ್ಲ.

21. ವಿಭಾಗೀಯ ಪೀಠದ ತೀರ್ಪಿನ ಕಂಡಿಕೆ 48 ರಲ್ಲಿ ಉಲ್ಲೇಖಿಸಿದಂತೆ ಅವಿಶ್ವಾಸ ಸೂಚನೆಯ ಪರಿಣಾಮಕ್ಕೆ ಸಂಬಂಧಿಸಿದಂತೆ ಪಟ್ಟ ಅಭಿಪ್ರಾಯವು ವಿಭಾಗೀಯ ಪೀಠದಲ್ಲಿ ಆದೇಶವನ್ನು ಹೊರಡಿಸಿದ ದಿನಾಂಕದಂದು

ಇದ್ದಂತೆ ಪರಿಗಣನೆಗೆ ಬಾಕಿ ಇರುವ ಅಧಿನಿಯಮದ 49 ( 2) ನೇ ಪ್ರಕರಣದ ಅಡಿಯಲ್ಲಿ ಮಂಡಿಸಲಾದ ಅವಿಶ್ವಾಸದ ಸೂಚನೆಗೆ ಸಂಬಂಧಿಸಿದಂತೆ ಅನ್ವಯವಾಗಬೇಕೆಂಬುದಾಗಿ ಅರ್ಥೈಸಬೇಕೆ ಹೊರತು ವಿಭಾಗೀಯ ಪೀಠದ ತೀರ್ಪಿನ ನಂತರವೂ ಸಹ (ಅಧಿನಿಯಮದ 49 ( 2) ನೇ ಪ್ರಕರಣದ ಅಡಿಯಲ್ಲಿ ಬರುವಂಥ) ಆಪಾದನೆಗಳ ಸಹಿತ ಮಂಡಿಸಬೇಕಾಗಿದ್ದಂಥ ಅವಿಶ್ವಾಸ ಸೂಚನೆಗೆ ಸಂಬಂಧಿಸಿದಂತೆ ಅನ್ವಯವಾಗಬೇಕೆಂದು ಅರ್ಥೈಸುವಂತಿಲ್ಲ.ಮೇಲಿನ ಚರ್ಚೆಯ ಹಿನ್ನಲೆಯಲ್ಲಿ, ಆಪಾದನೆಗಳ ಸಹಿತ ಅವಿಶ್ವಾಸ ಸೂಚನೆಯ ಮ ಂ ಡ ನೆಯು ಅನುಮತೀಯವಲ್ಲದ್ದಾಗಿದ್ದು, ಸಹಾಯಕ ಆಯುಕ್ತರು, ಮೇಲೆ ಉಲ್ಲೇಖಿಸಿದ ಅವಿಶ್ವಾಸ ಸೂಚನೆಯನ್ನು ಅಧಿನಿಯಮದ 49 ( 1) ನೇ ಪ್ರಕರಣದ ಅಡಿಯಲ್ಲಿನ ಅವಿಶ್ವಾಸ ಸೂಚನೆ ಎಂಬಂತೆ ಪರಿಗಣಿಸಿ, ಉಳಿಸುವ ಪ್ರಯತ್ನ ಮಾಡಲಾಗುವುದಿಲ್ಲ.ಅದನ್ನು ಪ್ರಕ್ರಿಯೆಯಲ್ಲಿ ಅವರಿಗೆ ವಹಿಸಿರುವ ಪಾತ್ರವೆಂಬುದಾಗಿ ಪರಿಗಣಿಸಲು ಅನುಮತಿ ನೀಡಿರುವುದಿಲ್ಲ.ಹಾಗಾಗಿ, ರಿಟ್ ಅರ್ಜಿಸಂಖ್ಯೆ: 844/2018 ರ ವಿಲೆ ನಂತರ, ಅಧಿನಿಯಮದ 49 ( 2) ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಲಾದ ಅರ್ಜಿಯನ್ನು ಅಧಿನಿಯಮದ 49 ( 1) ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಅರ್ಜಿ ಎಂದು ಪರಿಗಣಿಸಲು ಸಾಧ್ಯವಿಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

22. ಒಪ್ಪಿಕೊಂಡಂತೆ, ಮೇಲ್ನೋಟಕ್ಕೆ ಸದಸ್ಯರು ಮಾಡಿದ ನಿರ್ದಿಷ್ಟ ಆಪಾದನೆಗಳು ಇದ್ದು, ಮಂಡಿಸಲಾದ ಅವಿಶ್ವಾಸ ಸೂಚನೆಯು ಅಧಿನಿಯಮದ 49 ( 1) ನೇ ಪ್ರಕರಣದ ಮಂಡಿಸಿದ್ದಾ ಅಥವಾ 49 ( 2) ನೇ ಪ್ರಕರಣದ ಅಡಿಯಲ್ಲಿ ಮಂಡಿಸಿದ್ದೆ ಎಂಬುದನ್ನು ನಿರ್ದಿಷ್ಟಪಡಿಸುವ ಸದಸ್ಯರ ಅನುಪಸ್ಥಿತಿಯಲ್ಲಿ ಅದನ್ನು ಅಧಿನಿಯಮದ 49 ( 2) ನೇ ಪ್ರಕರಣದ ಅಡಿಯಲ್ಲಿ ಮಂಡಿಸಿದ ಅವಿಶ್ವಾಸ ಸೂಚನೆ ಎಂಬುದಾಗಿ ಭಾವಿಸಬೇಕಾಗುತ್ತದೆ.43 ನೇ ಕಂಡಿಕೆಯಲ್ಲಿ ಈ ಆರೋಪಗಳಿಗೆ ಸಂಬಂಧಿಸಿದಂತೆ ವಿಭಾಗೀಯ ಪೀಠದ ಅಭಿಪ್ರಾಯದಲ್ಲಿ ತಿಳಿಸಿದಂತೆ, ಈ ಆಪಾದನೆಗಳ ಬಗ್ಗೆ ಚರ್ಚೆಯ ಅವಶ್ಯಕತೆ ಇದೆ. ನಿಯಮಗಳು ಇಲ್ಲದಿರುವುದರಿಂದ ಸಾಧ್ಯವಿರದ ಕಾರ್ಯವಾಗಿರುತ್ತದೆ.

23. ಆದಾಗ್ಯೂ, ಪ್ರತಿವಾದಿ ಸದಸ್ಯರು ಆರೋಪಗಳನ್ನು ಬಿಟ್ಟುಬಿಡಲು ಮುಂದಾಗಿದ್ದು, ಸದಸ್ಯರಿಗೆ ಮುಕ್ತವಾಗಿರುವ ಏಕೈಕ ಆಯ್ಕೆ ಎಂದರೆ ಹೊಸ ನೋಟೀಸಿನ ಮೂಲಕ ಹಾಗೆ ಮಾಡುವುದಾಗಿದೆ.ತದನುಸಾರವಾಗಿ, ಅಧಿನಿಯಮದ 49 ( 1) ನೇ ಪ್ರಕರಣದ ಅಡಿಯಲ್ಲಿ ಹೊಸ ನೋಟೀಸನ್ನು ನೀಡಲು ಸದಸ್ಯರು ಸ್ವಾತಂತ್ರ್ಯ ಹೊಂದಿರುವರು ಎಂಬ ಅಭಿಪ್ರಾಯದೊಂದಿಗೆ ಅನುಬಂಧ-ಜಿ ಇದರಲ್ಲಿರುವ ಆದೇಶವನ್ನು ತಳ್ಳಿಹಾಕುವ ಮೂಲಕ ರಿಟ್ ಅರ್ಜಿಗೆ ಅನುಮತಿ ನೀಡಲಾಗಿದೆ.